ಅದರ ಬಗ್ಗೆ ಚರ್ಚೆ ಮಾಡುವುದು ಈಗಲ್ಲ. ಅವರು ಅಭಿನಂದನೆಯನ್ನು ಸಲ್ಲಿಸಬೇಕೆಂದು ಹೇಳುತ್ತಿದ್ದಾರೆ. ಅದನ್ನು ಪ್ರತ್ಯೇಕವಾದಂತಹ ಸಂದರ್ಭದಲ್ಲಿ ತನ್ನಿ. ಆ ಬಗ್ಗೆ ಚರ್ಚೆಯನ್ನು ಮಾಡೋಣ.

ಶ್ರೀ ಆಭಯಚಂದ್ರ : ನಮ್ಮ ತಾಲ್ಲೂಕಿನಲ್ಲಿರುವಂತಹ ಜನರು ಕೇಳುತ್ತಾರೆ. ಏನು ತಾಲ್ಲೂಕನ್ನಾಗಿ ಮಾಡಲಿಲ್ಲ. ನಾವು ಜನರಿಗೆ ಉತ್ತರವನ್ನು ಕೊಡಬೇಕಲ್ಲ.

ಅಧ್ಯಕ್ಷರು : ಅದನ್ನು ಬೇರೆ ರೂಪದಲ್ಲಿ ತನ್ನಿ.

5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ : ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ :

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಒಂದು ಸಮಿತಿಯನ್ನು ರಚಿಸಬೇಕೆಂದು ನಾವು ಹಿಂದೆ ಮಂಡನೆ ಮಾಡಿರುವಂತಹ ಸಂದರ್ಭದಲ್ಲಿ ಅದಕ್ಕೆ ಸರ್ಕಾರವು ಅವಕಾಶವನ್ನು ಕೊಟ್ಟಿತು. ಸಮಿತಿಯು ಎಲ್ಲಾ ಕಡೆಗಳಲ್ಲಿ ಪ್ರವಾಸವನ್ನು ಮಾಡಿ, ಅಧ್ಯಯನವನ್ನು ಮಾಡಿ, ಉತ್ತಮವಾದಂತಹ ಕೆಲಸವನ್ನು ಕಳೆದ ಒಂದು ವರ್ಷದಿಂದ ಮಾಡಿ ಒಂದು ವರದಿಯನ್ನು ತಯಾರು ಮಾಡಿದೆ. ನಾವೆಲ್ಲರೂ elections ನಲ್ಲಿ ಬಿಸಿಯಾಗಿದ್ದೆವು. ನಾವು ಮತ್ತು ನಮ್ಮ ಅಧ್ಯಕ್ಷರೆಲ್ಲರೂ ಕುಳಿತುಕೊಂಡು ಮಾತನಾಡಿ ಎಲೆಕ್ಷನ್ ಆದ ಮೇಲೆ ಕುಳಿತುಕೊಂಡು ಸಂಪೂರ್ಣವಾದಂತಹ ಡ್ರಾಫ್ಟ್ ವರದಿಯನ್ನು ನೋಡಿ ಏನು ಸಾಧಕಬಾಧಕಗಳು ಇವೆ ಆ ಬಗ್ಗೆ Central Government ಅವರ ಹತ್ತಿರವು ಕೂಡ ಚರ್ಚೆ ಮಾಡಿ ಅವರ ಅಭಿಪ್ರಾಯವನ್ನು ಪಡೆದು ಕೆಲವು ವಿಚಾರಗಳನ್ನು ರಾಜ್ಯದ ಹಿತದೃಷ್ಟಿಯಿಂದ ಈಗ ಆಗಿದ್ದು ಆಗಿದೆ, ಮುಂದಕ್ಕೆ ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕೆಂದು, ಅವರಿಂದ ಯಾವ ರೀತಿಯಾಗಿ ನಿಬಂಧನೆಯನ್ನು ಹಾಕಿಕೊಂಡು ಯಾವ ರೀತಿಯಾಗಿ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಬಗ್ಗೆ ಒಂದು ಸಮಗ್ರವಾದಂತಹ ಅಭಿಪ್ರಾಯಕ್ಕೆ ನಾವೆಲ್ಲರೂ ಬಂದಿದ್ದೆವು. ನಾವು 31ನೇ ತಾರೀಖಿನವರೆವರೆವಿಗೂ elections ಮಾಡುವ ಬಗ್ಗೆ permission ನ್ನು ಕೇಳಿದ್ದೇವೆ. ಆದರೆ ತರಾತುರಿಯಲ್ಲಿ 21ನೇ ತಾರೀಖು ನಮ್ಮ ಅಧ್ಯಕ್ಷರು,

ಅದರ ಬಗ್ಗೆ ಯಾವ ಒತ್ತಡವಿತ್ತೊ ಗೊತ್ತಿಲ್ಲ, ಅವರು ಬಂದು ಒಂದು ವರದಿಯನ್ನು ಸಲ್ಲಿಸಿದ್ದಾರೆ. ನಾನು ವರದಿಯನ್ನು ಸಲ್ಲಿಸಿರುವ ಬಗ್ಗೆ ನನ್ನದೇನು ಅಭ್ಯಂತರವಿಲ್ಲ. ಅವರಿಗೆ ಆ ಹಕ್ಕು ಇದೆ. ಆದರೆ ನಮ್ಮನ್ನು ಕೂಡ ನಾವು 8 ಜನರನ್ನು ಬಿಟ್ಟರೆ ಮಿಕ್ಕ ಯಾವ ಸದಸ್ಯರು ಕೂಡ ಅದಕ್ಕೆ ಸಹಿ ಮಾಡಿರುವುದಿಲ್ಲ. ಅನೇಕ ವಿಚಾರಗಳು ಇಲ್ಲಿ ಅಭಿಪ್ರಾಯದಲ್ಲಿದೆ. ಏಕೆಂದರೆ Bangalore International Airportನವರು ನಮಗೆ ಒಂದು commitmentನ್ನು ಕೊಟ್ಟಿದ್ದಾರೆ. ಅದು ಏನೆಂದರೆ, ಮುಂದಿನ ಎರಡು ವರ್ಷದೊಳಗಡೆ 10 ಲಕ್ಷ square feet ಈಗ ಎಷ್ಟು airpot ಇದೆ, ಅಂತಹದೇ ಆದಂತಹನ್ನು ನಾವು ಕಟ್ಟಿಕೊಡುತ್ತೇವೆ ಎಂದು ಹೇಳಿ ಅವರು ನಮ್ಮ Infrastructure Secretaryಯವರಿಗೆ ಮತ್ತು ನಮಗೆ writingನಲ್ಲಿ ಬರೆದುಕೊಟ್ಟು ಸಮಿತಿಗೆ ಕೊಟ್ಟಿದ್ದಾರೆ. ಇಂತಹ ಎಲ್ಲಾ ವಿಚಾರಗಳನ್ನು ನಾವು ಆ ಸಮಿತಿಯ ವರದಿಯಲ್ಲಿ ಅಳವಡಿಸಬೇಕಾಗುತ್ತದೆ. ನಾವು ಮಾಡಿರುವಂತಹ ಉದ್ದೇಶವೇನೆಂದರೆ, ಈ airport ಅಂತರರಾಷ್ಟ್ರೀಯ ಮಟ್ಟದಲ್ಲಿ ಇಲ್ಲ, ಇದು ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗಬೇಕು, ಜಾಗವು ಸಾಕಾಗುತ್ತಿಲ್ಲ, ಇನ್ನು ಜಾಗವು ಬೇಕಾಗಿತ್ತು, ಇದು ಬರಿ functional airport ಆಗಿದೆ. ಇದೊಂದು shed ಎನ್ನುವುದನ್ನು ಆ ಸಂದರ್ಭದಲ್ಲಿ ಒಂದು ವಾದವನ್ನು ಮಾಡಿದೆವು. ಆದ್ದರಿಂದ ನಾನು ಈ ಸಂದರ್ಭದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಇದ್ದಾರೆ. ಈ ಮಧ್ಯದಲ್ಲಿ ಕೆಲವು ಆಫೀಸರ್ಸ್‌ಗಳನ್ನು ಕೂಡ ಸುಮ್ಮನೆ ನಾವು vindictive ಮಾಡಿದ್ದೇವೆ. ಈಗ ನಾವು ಯಾರಿಂದ ಕೆಲಸವನ್ನು ತೆಗೆದುಕೊಳ್ಳಬೇಕು. ಅಫೀಸರ್ಸ್ ಇರಬಹುದು, ಕೆಲವರೆಲ್ಲರೂ ನಮಗೆ ಸಹಕಾರವನ್ನು ಕೊಟ್ಟಂತಹ ಶ್ರೀ ರಾಜೀವ್ ಚಂದ್ರಶೇಖರ್‌ರವರು ಇರಬಹುದು, ಇನ್ಫೋಸಿಸ್‌ನ ನಾರಾಯಣಮೂರ್ತಿಯವರು ಇರಬಹುದು, ಅವರೆಲ್ಲರೂ ಸರ್ಕಾರದ request ಮೇರೆಗೆ ಬಂದು ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಅಂತಹವರ ಮೇಲೆ ಕ್ರಮವನ್ನು ಜರುಗಿಸಿದರೆ, ಮತ್ತೊಂದು ಮಾಡುವುದಾದರೆ ಅದು ನಮ್ಮ ರಾಜ್ಯದ ಸಂಸ್ಕೃತಿಯಂತು ಅಲ್ಲ. ಈ ಎಲ್ಲ ವಿಚಾರಗಳನ್ನು, ಎಲ್ಲೋ ಒಂದು ಸಣ್ಣ ಲೋಪಗಳು ಆಗಿವೆ, ನಾವು ಮುಂದಕ್ಕೆ ಯಾರಿಂದ construction ಮಾಡಿಸಬೇಕು, ಯಾವ ಒಂದು consortium ಇದೆ, ಅವರನ್ನು ನಾವು ಏಕದಂ lift ಮಾಡಿಕೊಳ್ಳುವು

ದಕ್ಕಾಗುವುದಿಲ್ಲ, ನಾವು litigation ಹೋಗುವುದಕ್ಕಾಗುವುದಿಲ್ಲ ಎನ್ನುವುದನ್ನು Central Government ಕೂಡ ನಮಗೆ ಒಂದು ಕಿವಿ ಮಾತನ್ನು ಹೇಳಿತು. ಈ ಹಿನ್ನೆಲೆಯಲ್ಲಿ Pubilc Private Partnership ಮುಂದುವರಿಯಬೇಕು, ಈ ಮಾಡೆಲ್‌ಗೆ ಅತಿ ಹೆಚ್ಚು ಶಕ್ತಿಯನ್ನು ಕೊಡಬೇಕೆನ್ನುವಂತಹ ದೃಷ್ಟಿಯಿಂದ ನಾವು ಬಹಳ ದೊಡ್ಡಮನಸ್ಸಿನಿಂದ ನಾವು ವರದಿಯನ್ನು ಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಆ ವರದಿಗೆ ಒಂದು amendment ಅನ್ನೋ, ನನ್ನ ಪ್ರಕಾರ ಇದನ್ನು withdraw ಮಾಡಿಕೊಂಡು ಹೊಸದಾಗಿ ಇನ್ನೊಂದು ವಾರದಲ್ಲಿ ಇನ್ನೊಂದಷ್ಟು ಸೇರಿಸಿ ಕೊಡುವುದು ಉತ್ತಮ. ಆದರೆ Law Minister ರವರು ಯಾವ ರೀತಿಯಾಗಿ advice ಮಾಡುತ್ತಾರೋ, Chief Minister ರವರು ಯಾವ ರೀತಿಯಾಗಿ advice ಮಾಡುತ್ತಾರೋ. ಏಕೆಂದರೆ ನಾವು vindictive ಆಗಿ ಈ ಒಂದು ವರದಿಯನ್ನು ಕೊಡುವುದು ಸೂಕ್ತವಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. Positive approach ಹಾಕಿಕೊಂಡು ಹೋಗಬೇಕಾಗುತ್ತದೆ. ಇಲ್ಲಿ ಯಾವ ಅಧಿಕಾರಿಗಳ ಮೇಲೆ ಕೂಡ ಇಲ್ಲಿ ಸಾಧನೆ ಮಾಡಿದರೆ ಅದು ಉಪಯೋಗವಾಗುವುದಿಲ್ಲ. ಇಲ್ಲಿ ಏನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮುಂದಕ್ಕೆ ಏನಾಗಬೇಕೆಂಬುದರ ಬಗ್ಗೆ ಅವರು commitment ನ್ನು ಕೊಟ್ಟಿದ್ದಾರೆ. ಅದನ್ನು ದಾಖಲೆಯಲ್ಲಿ ಅಳವಡಿಸಿ ಈ ಎಲ್ಲಾ ವಿಚಾರಗಳನ್ನು ಸೇರಿಸಿ ವರದಿಯನ್ನು ಸಲ್ಲಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡ ಬೇಕೆಂಬದನ್ನು ಹೇಳಿ ನಮ್ಮ ಎಲ್ಲಾ ಸದಸ್ಯರ ಪರವಾಗಿ ನಾನು ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ಸಮಿತಿಯ ಅಧ್ಯಕ್ಷರ ಹತ್ತಿರ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು 3–4 ಅಂಶಗಳನ್ನು ಗಮನಕ್ಕೆ ತಂದಿದ್ದಾರೆ. ಮೊದಲನೆಯದು ಈ ಕಮಿಟಿಯು ಒಳ್ಳೆಯ ಕೆಲಸವನ್ನು ಮಾಡಿದೆ, ಕಮಿಟಿಯು ರಿಪೋರ್ಟ್‌ನ್ನು ಕೊಡಬೇಕಾಗಿತ್ತು. 31ನೇ ತಾರೀಖಿನವರೆವಿಗೂ ಅದರ ವಿಸ್ತರಣೆಗೆ ಕೇಳಿಕೊಂಡಿದ್ದರು. ಅದಕ್ಕಿಂತ ಮುಂಚೆ 21ನೇ

ತಾರೀಖಿನಂದೇ ಮಂಡಿಸಿದ್ದಾರೆ. ಅವರು ವರದಿಯ ಬಗ್ಗೆ, ವರದಿಯನ್ನು ಮಂಡಿಸಿರುವ ಬಗ್ಗೆ ನಮ್ಮದೇನು ಆಕ್ಷೇಪಣೆ ಇಲ್ಲವೆಂದು ಸಹ ಹೇಳಿದ್ದಾರೆ. ಅವರು ಕೆಲವು ಲೋಪದೋಷಗಳು ಆಗಿವೆ ಎಂದು ಹೇಳುತ್ತಿದ್ದಾರೆ. ಕೆಲವು ಮಹತ್ವದ ಅಂಶಗಳನ್ನು ಸೇರಿಸಬೇಕಾಗಿತ್ತು. ಅವರು ಏನು ಕಮಿಟ್‌ಮೆಂಟ್ ಮಾಡಿದ್ದರು, ಆ ಕಮಿಟ್‌ಮೆಂಟ್ ಅಂಶವನ್ನು ಸೇರಿಸಿ ವಿಶೇಷವಾಗಿ ಕಟ್ಟಿಸಿಕೊಡುತ್ತೇವೆಂದು ಏನು ಹೇಳಿದ್ದಾರೆ, ಅದನ್ನು ಹೇಳಬೇಕಾಗಿತ್ತು ಎಂಬ ಒಂದು ಅಂಶವನ್ನು ಹೇಳಿದ್ದಾರೆ. ಅದಕೋಸ್ಕರ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ಒಂದು ಸಲ ಇದನ್ನು ಮಂಡಿಸಿದ ಮೇಲೆ, once a report is placed before the House, it is the property of the House. ಅದಕೋಸ್ಕರ, ಚರ್ಚೆಯನ್ನು ಮಾಡುವ ಸಂದರ್ಭದಲ್ಲಿ ಮಾಡಬಹುದು, ಆದರೆ, ವಿಶೇಷವಾಗಿ ಇಲ್ಲಿ ಏನು ಲೋಪದೋಷಗಳು ಆಗಿವೆ, ಅದು ಬಿಟ್ಟುಹೋಗಿದೆ ಎಂದು ಹೇಳುತ್ತಿದ್ದಾರೆ. ಅದನ್ನು addenda ಆಗಿ ಏನು ಲೋಪದೋಷಗಳು ಆಗಿವೆ ಅದನ್ನು ಸರಿಪಡಿಸುವಂತಹ ದಿಕ್ಕಿನಲ್ಲಿ ಪ್ರಿಂಟ್ ಮಾಡುವಾಗ ಯಾವುದಾದರೂ ಬಿಟ್ಟುಹೋಗಿದ್ದರೆ ಅದನ್ನು ಸೇರಿಸಿ ಮುಂದಿನ ವಾರದಲ್ಲಿ ಸೇರಿಸಿಕೊಟ್ಟರೆ that will become part of the Committee report.

ಅಧ್ಯಕ್ಷರು : ಆಯಿತು.

ಶ್ರೀ ಎಸ್. ಸುರೇಶ್‌ಕುಮಾರ್ : ಒಂದು ಸಲ ಇದಕ್ಕೆ ಅವಕಾಶವನ್ನು ಕೊಟ್ಟಾಗ ಮಾತ್ರ ಇಲ್ಲಿ ರಿಪೋರ್ಟ್ ಬಗ್ಗೆ ಚರ್ಚೆಗೆ ಅವಕಾಶವಿದೆ. ಚರ್ಚೆಗೆ ಅವಕಾಶ ಇಲ್ಲ. It cannot become the agenea. ಆ ಒಂದು ರಿಪೋರ್ಟನ್ನು ಚರ್ಚೆಗೆ ಬಿಡಬೇಕು. ಇಲ್ಲದೆ ಇದ್ದಾಗ....ಅದು ಒಳ್ಳೆಯ ಸಂಸ್ಕೃತಿಯಲ್ಲ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೆ, ಇದು ಚರ್ಚೆಯಲ್ಲ.....

ಶ್ರೀ ಟಿ.ಬಿ. ಜಯಚಂದ್ರ : ಇಲ್ಲಿ ಚರ್ಚೆಯಲ್ಲ ಅಧ್ಯಕ್ಷರೆ, ಇಲ್ಲಿ ನಿಯಮಾವಳಿಗಳ ಉಲ್ಲಂಘನೆಯಾಗಿರುವಂತಹದ್ದು, ಇದರಲ್ಲಿ ಒಂದು ಸಾರಿ ರಿಪೋರ್ಟನ್ನು present ಮಾಡಿದ ಮೇಲೆ ಈಗ ಅದನ್ನು ವಾಪಸ್ಸು ಪಡೆಯುವುದರ ಬಗ್ಗೆ. ಈಗ ಮಾನ್ಯ ಸದಸ್ಯರು ಕೊಟ್ಟಿರುವಂತಹದ್ದು ಏನೆಂದರೆ, ಅನೇಕ ಸಲಹೆಗಳನ್ನು ಸೇರಿಸುವುದಕ್ಕೋಸ್ಕರ ಬಗ್ಗೆ ಅವಕಾಶವನ್ನು ಮಾಡಿಕೊಡಬೇಕು. ಅದಕೋಸ್ಕರ ಅದನ್ನು ವಾಪಸ್ಸು ಪಡೆಯಬೇಕು. ಈಗ

ಅದನ್ನು ವಾಪಸ್ಸು ಯಾರು ಪಡೆಯಬೇಕು. ಏಕೆಂದರೆ, ಇಲ್ಲಿ ಏನು ಉದ್ಭವಿಸುತ್ತದೆ ಎಂದರೆ, ಒಂದು crisis ಆಗಿದೆ. ಸದನದ ಸಮಿತಿ ಒಂದು ಜವಾಬ್ದಾರಿಯಾಗಿರುವಂತಹ ಸಮಿತಿಯಾಗಿದೆ. ಒಂದು ರಿಪೋರ್ಟನ್ನು ಕೊಡುವಂತಹದ್ದು, ಅಮೇಲೆ ಯಾವುದೇ ಕಾರಣಕೋಸ್ಕರ ಅದನ್ನು ವಾಪಸ್ಸು ಪಡೆಯುವಂತಹದ್ದು, ಎಲ್ಲೋ ಒಂದು ಕಡೆಗೆ ಇದು ಒಂದು ಸಮಿತಿಯ ಕಾರ್ಯದಕ್ಷತೆಯ ಬಗ್ಗೆ ಒಂದು ಚ್ಯುತಿಯನ್ನು ತಂದಂತೆ ಆಗಲಿಲ್ಲವೇ? ಇದು ಒಂದು ಜಂಟಿ ಸದನದ ಸಮಿತಿ, ಜಂಟಿ ಸದನದ ಸಮಿತಿಯಲ್ಲಿಯೇ ಈ ರೀತಿಯಾದಂತಹ ಕೆಲಸಗಳು ಆಗುತ್ತದೆ ಎಂದರೆ, ಇನ್ನು ಯಾರನ್ನು ನಂಬುವುದು? ನಾನು ದಯಮಾಡಿ ಹೇಳುವುದು, ಇದನ್ನು ವಾಪಸ್ಸು ಪಡೆಯಬೇಕಾದರೆ ನಿಮಗೆ ಅಧಿಕಾರವಿದೆಯೇ? ಇಲ್ಲಾ. ಮಾನ್ಯ ಸದಸ್ಯರನ್ನು, ಇವತ್ತು ಸಮಿತಿಯ ಅಧ್ಯಕ್ಷರು ಇದ್ದಾರಲ್ಲಾ ಅದನ್ನು ಮಂಡನೆ ಮಾಡಿ, ವಾಪಸ್ಸು ಪಡೆಯುವಂತಹ ಕೆಲಸವನ್ನು ಮಾಡಿ, ಹಿಂದೆ ಏನೆಲ್ಲಾ ತಪ್ಪುಗಳು ಆಗಿದೆ ಎನ್ನುವುದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಸೂಕ್ತವಾಗಿರುವಂತಹ ವರದಿಯನ್ನು ಬಹುಮತವನ್ನು ಇಟ್ಟುಕೊಂಡು ಕೊಡುವಂತಹದ್ದು ಆಗಬೇಕು. ಈಗ ಏನಾಗಿದೆಯೆಂದರೆ ಸರ್ವೆಸಾಮಾನ್ಯ ವಾಗಿ ಕೋರಂಗೆ 8 ಜನ ಇರಬೇಕು. 8 ಜನ ಇದ್ದಾಗ ಅದು ಪೂರ್ಣ ರಿಪೋರ್ಟ್ ಆಗುತ್ತದೆಯೇ? ಎಲ್ಲೋ ಒಂದು ಕಡೆ ನಿಯಮಾವಳಿಯಲ್ಲಿಯೂ ಬದಲಾವಣೆ ಮಾಡಬೇಕಾಗುತ್ತದೆ. ಈ ರೀತಿ ಯಾರೋ ಒಬ್ಬರು ಉದ್ದೇಶದಿಂದ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ, ದುರುದ್ದೇಶ ದಿಂದಲೂ ಮಾಡಲು ಅವಕಾಶವಾಗುತ್ತದೆ. ಆ ಕಾರಣಕ್ಕೋಸ್ಕರ ನಿಯಮಾವಳಿಯಲ್ಲಿ ಬದಲಾವಣೆ ಮಾಡಿ. ನೀವು ಈ ರೀತಿ ವರದಿಯನ್ನು ಕೊಡಬೇಕಾದಾಗ ಕನಿಷ್ಠ ಪಕ್ಷ 2/3rd ಇರಬೇಕೆಂದು ತೀರ್ಮಾನ ಮಾಡಬೇಕು. ನೀವು Parliamentary Affairs Minister ಅವರ ಕಡೆಯಿಂದ ವಾಪಸ್ಸು ಪಡೆದು ಇನ್ನುಮುಂದೆ ಈ ರೀತಿ ಮುರುಕಳಿಸದ ರೀತಿಯಲ್ಲಿ ನಿಯಮಾವಳಿಯಲ್ಲಿ ಬದಲಾವಣೆ ತರಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ : ಈ ರಿಪೋರ್ಟ್‌ನಲ್ಲಿ ಏನಾಗಿದೆ ಎಂದರೆ Rules and procedureನ ನಿಯಮ 229 ರಲ್ಲಿ "A Committee may, if it thinks fit, make a special report on any matter that

arises or comes to light in the course of its work which it may considered necessary to bring to the notice of the speaker or the house not withstanding that such matter is not directly connected with, or does not fall within or is not incidental to its terms of reference.

Provided names of persons shall not be included in the report of the Committee unless he be summoned to appear before the Committee and given an opportunity to explain himself before the Committee."

ನೀವು ಅವರನ್ನು ಸಮನ್ ಮಾಡಿಲ್ಲ. NRN ರವರನ್ನು ಸಮನ್ ಮಾಡಿಲ್ಲ. ನೀವು ಕಮಿಟಿ ತೀರ್ಮಾನ ತೆಗೆದುಕೊಳ್ಳುವಾಗ ಅವರ explanation ಕೇಳಿಲ್ಲ. ಅವರ ಬಗ್ಗೆ ನೀವು.

6. ಗಮನ ಸೆಳೆಯುವ ಸೂಚನೆ :

ವಿಷಯ : ಶ್ರೀಯುತರಾದ ಕೆ.ಅಭಯಚಂದ್ರ ಜೈನ್, ಯು.ಟಿ. ಖಾದರ್ ಹಾಗೂ ಬಿ.ರಮಾನಾಥ್ ರೈ ಅವರುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿ ಮತ್ತು ಮೋಜಣಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಜರೂರಾಗಿ ಇತ್ಯರ್ಥಪಡಿಸುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯುವುದು :

ಶ್ರೀ ಕೆ.ಅಭಯಚಂದ್ರ ಜೈನ್ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿ ಮತ್ತು ಮೋಜಣಿಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಜರೂರಾಗಿ ಇತ್ಯರ್ಥಪಡಿಸುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ.ಕರುಣಾಕರರೆಡ್ಡಿ (ಕಂದಾಯ ಸಚಿವರು) : ಸದಸ್ಯರ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡಂತೆ ಹೇಳಿಕೆ ನೀಡುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಕಳೆದ ಕೆಲವು ವಾರಗಳ ಹಿಂದೆ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯ ಮತ್ತು ಭೂಮಾಪನ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆ ಮತ್ತು ಚರ್ಚೆಗಳ ಹಿನ್ನೆಲೆಯಲ್ಲಿ ಮೂಡಿ ಬಂದ ಅಭಿಪ್ರಾಯವನ್ನು ಸಂಗ್ರಹಿಸಿ ಜಿಲ್ಲೆಯಲ್ಲಿನ